**ಮುಂಗಾರು ಆರಂಭವಾಗುತ್ತಿದ್ದಂತೆ ಕಾಣಿಸಿಕೊಳ್ಳುವ ಈ ಕೆಂಪು ಸುಂದರಿಯ ಹೆಸರು ‘ಮಾನ್ಸೂನ್ ಲಿಲ್ಲಿ’. ಎರಡು ಮೂರು ವಾರಗಳವರೆಗೆ ಅರಳಿ ಚೆಲುವು ಬಿತ್ತರಿಸುವ ಈ ವಿಶಿಷ್ಟ ಹೂ ಗಿಡ ಔಷಧವಾಗಿಯೂ ಬಳಕೆಯಲ್ಲಿದೆ.**



# ಮುಂಗಾರಿನ ಸಖಿ ಮಾನ್ಸೂನ್ ಲಿಲ್ಲಿ

■ ಜಿ.ಆರ್. ಪಂಡಿತ್, ಸಾಗರ

ಮೊದಲ ಮಳೆಗೆ, ಕೈತೋಟದ ಮೂಲೆಯಲ್ಲಿ ಗೊಂಚಲು ಗೊಂಚಲಾಗಿ ಕೆಂಪನೆಯ ದುಂಡಗಿನ ಹೂವೊಂದು ಅರಳಿ ನಿಂತಿತ್ತು. ಬೇಸಿಗೆಯ ಇಷ್ಟು ದಿನ ಅದರ ಗಿಡ ಎಲ್ಲಿತ್ತೆಂಬುದೂ ಗೊತ್ತಾಗುತ್ತಿರಲಿಲ್ಲ.

ಮಳೆಯೊಂದಿಗೆ ಅಸ್ತಿತ್ವ ಪ್ರಕಟಪಡಿಸುವ ಈ ಗಿಡಗಳ ಹುಟ್ಟು ವಿಚಿತ್ರ. ಪ್ರತಿಕೂಲ ಪರಿಸ್ಥಿತಿಯಲ್ಲಿ ಇವು ಮಣ್ಣಿನೊಳಗೆ ಬಲ್ಬ್ ಆಕಾರದ ಸಂಗ್ರಹಣಾ ಕೋಶದೊಳಗೆ ತಮ್ಮನ್ನು ಬಚ್ಚಿಟ್ಟುಕೊಳ್ಳುತ್ತವೆ. ಮಳೆ ಬಿದ್ದ ತಕ್ಷಣ ಹೊರಬಂದು ಹೂವಾಗಿ ಅರಳುತ್ತವೆ. ಎಲೆಗಳು ಸಾಮಾನ್ಯವಾಗಿ ಹೂ ಬಿಡುವ ಅವಧಿಯ ನಂತರ ಕಾಣಿಸಿಕೊಳ್ಳುತ್ತವೆ. ಎಲೆಗಳು ಅಗಲವಾಗಿದ್ದು, ನಯವಾದ ಹಸಿರಿನಿಂದ ಕೂಡಿದ ಮೇಲ್ಮೈ ಹೊಂದಿರುತ್ತವೆ. 30ರಿಂದ 40 ಸೆಂಟಿ ಮೀಟರ್‌ಗಳಷ್ಟು ಉದ್ದವಾಗಿರುತ್ತವೆ. ಬೇಸಿಗೆಯ ಕೊನೆಯಲ್ಲಿ, ಅಂದರೆ ಮುಂಗಾರು ಆರಂಭದಲ್ಲಿ ಇವು ಹೆಚ್ಚಾಗಿ ಅರಳುವುದರಿಂದ ನಮ್ಮಲ್ಲಿ ಈ ಹೂವನ್ನು ‘ಮಾನ್ಸೂನ್ ಲಿಲ್ಲಿ’ ಎಂದು ಕರೆಯುತ್ತಾರೆ.

ಬ್ಲಡ್ ಫ್ಲವರ್, ಆಫ್ರಿಕನ್ ಬ್ಲಡ್ ಲಿಲ್ಲಿ, ಫೈರ್ ಬಾಲ್ ಲಿಲ್ಲಿ, ಫುಟ್ಬಾಲ್ ಲಿಲ್ಲಿ ಎಂದೂ ಇವುಗಳನ್ನು ಕರೆಯುತ್ತಾರೆ. ಕೆಂಪು ಗೋಳಾಕಾರದ ಹೂವುಗಳಿಗೆ ಹೆಸರುವಾಸಿಯಾದ ಈ ಸಸ್ಯ ‘ಅಮರಿಲ್ಲಿಡೇಸಿ’ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ‘ಸ್ಕಾಡಾಕ್ಸಸ್ ಮಲ್ಟಿಫ್ಲೋರಸ್’. ಗ್ರೀಕ್ ಭಾಷೆಯಲ್ಲಿ ಸ್ಕಾಡಾಕ್ಸಸ್ ಅಂದರೆ ‘ಸೌಂದರ್ಯದ ವೈಭವ’ ಎಂದರ್ಥ. ‘ಮಲ್ಟಿಫ್ಲೋರಸ್’ ಅನೇಕ ಹೂವುಗಳ ಗೊಂಚಲುಗಳನ್ನು ಸೂಚಿಸುತ್ತದೆ.

ಹೂವಿನ ತಲೆಯ ಭಾಗವು ದೊಡ್ಡದಾದ ಗೋಳಾಕಾರದ ಛತ್ರಿಯಂತಿದ್ದು, ಇನ್ನೂರಕ್ಕೂ ಹೆಚ್ಚು ಸಣ್ಣ ನಕ್ಷತ್ರಾಕಾರದ ಕೆಂಪು ಅಥವಾ ಕಿತ್ತಳೆಗೆಂಪಿನ ಹೂವುಗಳಿಂದ ಕೂಡಿರುತ್ತದೆ. ಪ್ರತಿಯೊಂದು ಚಿಕ್ಕ ಹೂವೂ ಪ್ರಕಾಶಮಾನವಾದ ಹಳದಿ ಬಣ್ಣದ ಕೇಶರಗಳಿಂದ ಕಂಗೊಳಿಸುತ್ತದೆ. ಈ ಹೂವುಗಳು 30ರಿಂದ 60 ಸೆಂ.ಮೀ. ಎತ್ತರದ ಹಸಿರು ಕಾಂಡದ ಮೇಲೆ ನಿಂತಿರುತ್ತದೆ.

ಇದು ಮೂಲತಃ ದಕ್ಷಿಣ ಆಫ್ರಿಕಾದ ಸಸ್ಯವಾದರೂ ಉಷ್ಣವಲಯದ ಹವಾಮಾನಗಳಿಗೆ ಹೊಂದಿಕೊಂಡು ಅರಣ್ಯದ ಅಂಚುಗಳು, ಕಾಡು ಪ್ರದೇಶಗಳು, ಹುಲ್ಲುಗಾವಲು, ನದಿ ತೀರಗಳು, ತೇವಾಂಶವುಳ್ಳ ನೆರಳಿನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತವೆ. ಮಾನ್ಸೂನ್ ಲಿಲ್ಲಿಗಳು ವರ್ಷಕ್ಕೆ ಒಮ್ಮೆ ಮಾತ್ರ ಅರಳುತ್ತವೆ. ಹೂ ಬಿಡುವ ಚಕ್ರವನ್ನು ಪುನರಾರಂಭಿಸಲು ಅವುಗಳಿಗೆ ಕನಿಷ್ಠ ಎಂಟು ವಾರಗಳ ತಂಪಾದ ಚಳಿಗಾಲದ ಸುಪ್ತ ಅವಧಿಯ ಅಗತ್ಯವಿದೆ. ಪ್ರತಿ ಸಸ್ಯವೂ ವರ್ಷದಲ್ಲಿ ಎರಡು–ಮೂರು ವಾರಗಳವರೆಗೆ ಅರಳಿ ನಂತರ ಒಣಗಿ ಹೋಗುತ್ತವೆ.

ಬಣ್ಣದ ಹೂವುಗಳಿಗಾಗಿ ಇದನ್ನು ಆಲಂಕಾರಿಕ ಸಸ್ಯವಾಗಿ ಬೆಳೆಸುತ್ತಾರೆ. ಉದ್ಯಾನವನಗಳಲ್ಲಿ, ಚೆನ್ನಾಗಿ ನೀರು ಬಸಿದು ಹೋಗುವ ಹಗುರವಾದ ಮಣ್ಣಿನಲ್ಲಿ ಇವುಗಳನ್ನು ಬೆಳೆಸಬಹುದು. ಮಣ್ಣು ಸಾಕಷ್ಟು ಫಲವತ್ತಾಗಿದ್ದರೆ ದೊಡ್ಡ ಮರಗಳ ಬುಡದಲ್ಲಿಯೂ ಬೆಳೆಯುತ್ತವೆ.

ಕೆಲವು ಆಫ್ರಿಕನ್ ಬುಡಕಟ್ಟು ಜನಾಂಗಗಳಲ್ಲಿ ಈ ಹೂವನ್ನು ಅದೃಷ್ಟದ ಸಂಕೇತವೆಂದು ಪರಿಗಣಿಸುತ್ತಾರಲ್ಲದೇ ದುಷ್ಟ ಶಕ್ತಿಗಳನ್ನು ದೂರವಿಡಲು ಮನೆಗಳು ಮತ್ತು ಪವಿತ್ರ ಸ್ಥಳಗಳಲ್ಲಿ ನೆಡುತ್ತಾರೆ. ನಾಟಿ ವೈದ್ಯರು ತಲೆನೋವು, ಉಸಿರಾಟದ ಸಮಸ್ಯೆ ಮತ್ತು ಗಾಯದ ಚಿಕಿತ್ಸೆಗಳಲ್ಲಿ ಈ ಸಸ್ಯದ ಬಲ್ಬ್ ಮತ್ತು ಬೇರನ್ನು ಬಳಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in